# ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ದಾಂಪತ್ಯ ಬದುಕಿನ ಅನಾವರಣ

ನಂದಿನಿ ಎ.ಆರ್.

ಸಂಶೋಧನಾರ್ಥಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.

DOI: https://doi.org/10.5281/zenodo.18787603

## ABSTRACT:

'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಎಂದರೆ ಎಲ್ಲಿ ಸ್ತ್ರೀಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂದು ಮನುಸ್ಮೃತಿಯಲ್ಲಿ ತಿಳಿಸಲಾಗಿದೆ. ಆದರೆ ಅನಾದಿ ಕಾಲದಿಂದಲೂ ಸ್ತ್ರೀಯು ದ್ವಿತೀಯ ಪ್ರಜೆಯ ಸ್ಥಾನವನ್ನು ಪಡೆದಿದ್ದು, ಸಮಾಜದ ಮೂಲ ಘಟಕವಾದ ಕುಟುಂಬದಲ್ಲಿಯೇ ಹೆಣ್ಣು ಗೌರವಿಸಲ್ಪಡುತ್ತಿದ್ದಾಳೆಯೇ ಎಂದು ಪ್ರಶ್ನೆ ಹಾಕಿದರೆ ಅದಕ್ಕೆ ನಕಾರತ್ಮಕವಾದ ಉತ್ತರ ದೊರೆಯುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಾರಂತರು 1937ರಲ್ಲಿ ದಾಂಪತ್ಯ ಜೀವನದಲ್ಲಿ ಸ್ತ್ರೀಯು ಹೇಗೆ ಶೋಷಿತಳಾಗುತ್ತಿದ್ದಾಳೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳಲ್ಲಿ ಸ್ತ್ರೀ ಪಾತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಇದಕ್ಕೆ ನಿದರ್ಶನವೆನ್ನುವಂತೆ 1994ರಲ್ಲಿ ಈ ಕೃತಿಯ ಮರು ಮುದ್ರಣದ ಮುನ್ನುಡಿಯಲ್ಲಿ ಒಂದು ಉದಾಹರಣೆಯನ್ನು ಕಾರಂತರು ನೀಡುತ್ತಾರೆ. ರಜಪೂತಾನದಲ್ಲಿ ರೂಪಕನ್ವಾರ್ ಎನ್ನುವ ಮಹಿಳೆಯ ಸತಿಧ್ವಂಸ ಪ್ರಕರಣ. ಇದೇ ಮುನ್ನುಡಿಯಲ್ಲಿ ಮುಂದುವರೆದು ಕಾರಂತರೇ ಈ ರೀತಿ ಹೇಳುತ್ತಾರೆ: ಪುರುಷ ಪ್ರಧಾನ ಸಮಾಜದಲ್ಲಿ "ಜೀವನದ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀಯ ಮನಸ್ಸು ಮತ್ತು ಶರೀರಗಳೆರಡೂ ಅವನ ಸೊತ್ತು. ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ". ಸರಸಮ್ಮನ ಸಮಾಧಿ ಕಾದಂಬರಿಯಲ್ಲಿ ಬರುವ ಪ್ರಮುಖ ಸ್ತ್ರೀ ಪಾತ್ರಗಳೆಂದರೆ ಜಾನಕಿ, ಭಾಗೀರಥಿ, ಸುನಾಲಿನಿ, ಸರಸಮ್ಮ, ನಾಗವೇಣಿ. ಇವರಲ್ಲಿ ಒಬ್ಬೊಬ್ಬರದು ಒಂದೊಂದು ಕಥೆ.

ತನ್ನ ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ಗಂಡನೊಂದಿಗೆ ಮಾತನಾಡಿ ವಿಫಲಳಾಗುವ ಜಾನಕಿ, ಗಂಡನ ಸಮಯವನ್ನು ತನಗಾಗಿ ಕೇಳುವ ಸುನಾಲಿನಿ ಗಂಡ ಮತ್ತು ಅತ್ತೆಯ ಶೋಷಣೆಗೆ ಒಳಗಾಗುತ್ತಾಳೆ. ಮದುವೆಯಾಗಿ ಮಾವನ ಮನೆಗೆ ಬರುವ ಭಾಗೀರಥಿ, ಅತ್ತೆ ಮಾವನಲ್ಲಿ ಸೊಸೆಯ ಬಗೆಗಿರುವ ಭಾವನೆ ತಿಳಿದು ತವರು ಮನೆಗೆ ತೆರಳಿ ಜನರ ಬಾಯಿಂದ ವ್ಯಭಿಚಾರಿಣಿ ಎನಿಸಿಕೊಳ್ಳುವಳು. ಜನರ ಬಾಯಿಯಲ್ಲಿ ಮಹಾಸತಿ, ದಾಂಪತ್ಯ ದೇವತೆ ಎಂದು ಪ್ರಸಿದ್ಧಿ ಪಡೆದಿರುವ ಸರಸಮ್ಮ ತನ್ನ ಪ್ರೀತಿಯನ್ನು ಪಡೆಯಲು, ಆತ್ಮಸಖನಿಗಾಗಿ ಅತೃಪ್ತ ಆತ್ಮವಾಗಿ ಅಲೆದಾಡುವುದನ್ನು ಕಾಣಬಹುದಾಗಿದೆ. ಹೀಗೆ ಹಲವು ಮಜಲುಗಳಲ್ಲಿ ದಾಂಪತ್ಯ ಸಂಬಂಧದಲ್ಲಿನ ಸ್ತ್ರೀ ಸಂವೇದನೆಯನ್ನು ಕಾರಂತರು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

## KEYWORDS:

ಅಡಾಉಡಿ, ಸತಿಪದ್ಧತಿ, ಸರಸಮ್ಮನ ಸಮಾಧಿ, ಮನುಸ್ಮೃತಿ, ರೂಪಕನ್ವಾರ್.

'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಎಂದರೆ ಎಲ್ಲಿ ಸ್ತ್ರೀಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂದು ಮನುಸ್ಮೃತಿಯಲ್ಲಿ ತಿಳಿಸಲಾಗಿದೆ. ಆದರೆ ಸಮಾಜದ ಮೂಲ ಘಟಕವಾದ ಕುಟುಂಬದಲ್ಲಿಯೇ ಹೆಣ್ಣು ಗೌರವಿಸಲ್ಪಡುತ್ತಿದ್ದಾಳೆಯೇ ಎಂದು ಪ್ರಶ್ನೆ ಹಾಕಿದರೆ ಅದಕ್ಕೆ ನಕಾರಾತ್ಮಕವಾದ ಉತ್ತರ ದೊರೆಯುತ್ತದೆ. ದಾಂಪತ್ಯ ನೀತಿಯೆಂಬುದು ಯಾವ ದೇಶವನ್ನು, ಯಾವ ಕಾಲವನ್ನು ಬಿಟ್ಟಿರದ ಸಮಸ್ಯೆಯಾಗಿದ್ದು, ಆಧುನಿಕ ಜಗತ್ತು ಸಹ ಇದಕ್ಕೆ ಹೊರತಾಗಿಲ್ಲ. ಋಷಿ ಮನುವಿನ ಮನುಸ್ಮೃತಿಯಲ್ಲಿ, ಮಹಾಭಾರತ, ರಾಮಾಯಣದಲ್ಲಿ ಚಿತ್ರಿತವಾಗಿರುವ ಮಹಾಸತಿಯರಂತೆ ನಮ್ಮ ಮನೆಗಳಲ್ಲಿನ ಸ್ತ್ರೀಯರನ್ನು ಚಿತ್ರಿಸಲು ತೊಡಗಿದ್ದೇವೆಯೇ ಹೊರತು ಆಕೆಯನ್ನು ಆಸೆಗಳು, ಭಾವನೆಗಳಿರುವ ಮನುಷ್ಯಳಾಗಿ ಪರಿಗಣಿಸುವುದೇ ಇಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ಸಮಾಜದಲ್ಲಿ ನಡೆಯುವ ಬಾಲ್ಯವಿವಾಹ, ಸತಿಪದ್ಧತಿ, ಮರ್ಯಾದಾ ಹತ್ಯೆ, ಮಹಿಳೆಯರ ಮೇಲಿನ ಅತ್ಯಾಚಾರಗಳು ನಮಗೆ ಉದಾಹರಣೆಯಾಗಿವೆ. 19ನೇ ಶತಮಾನದಲ್ಲಿಯೂ ಸಹ ರಜಪೂತಾನ ಮಹಿಳೆ 'ರೂಪಕನ್ವಾರ್'ಳ ಸತೀಧ್ವಂಸ ಪ್ರಕರಣ ನಮ್ಮ ಕಣ್ಣ ಮುಂದಿದೆ. ದಾಂಪತ್ಯ ಜೀವನದಲ್ಲಿ ಸ್ತ್ರೀಯು ಹೇಗೆ ಶೋಷಿತಳಾಗುತ್ತಿದ್ದಾಳೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಕಾರಂತರು 1937ರಲ್ಲಿ 'ಸರಸಮ್ಮನ ಸಮಾಧಿ' ಎಂಬ ಕಾದಂಬರಿಯನ್ನು ರಚಿಸಿದ್ದು, ಇದರಲ್ಲಿ ದಾಂಪತ್ಯ ಜೀವನದಲ್ಲಿ ಸ್ತ್ರೀಯ ಅಸ್ತಿತ್ವದ ಹುಡುಕಾಟದ ಬಗ್ಗೆ ವಿವಿಧ ಆಯಾಮಗಳಲ್ಲಿ ಸ್ತ್ರೀಯ ಪಾತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ದಾಂಪತ್ಯ ನೀತಿಗೆ ಸಂಬಂಧಿಸಿದಂತೆ ರಚನೆಯಾದ ಈ ಕಾದಂಬರಿಯು ಬಹು ಚರ್ಚೆಗೆ ಗ್ರಾಸವಾಯಿತು. ಹೆಸರೇ ಸೂಚಿಸುವಂತೆ ಈ ಕಾದಂಬರಿಯು ಸತಿಪದ್ಧತಿಗೆ ಸಂಬಂಧಿಸಿದ ಕಾದಂಬರಿಯಂತೆ ಮೇಲ್ನೋಟಕ್ಕೆ ಕಂಡುಬಂದರೂ ಸಹ ಅದರೊಳಗೆ ದಾಂಪತ್ಯ ಜೀವನದಲ್ಲಿ ತಮ್ಮ ಅಸ್ತಿತ್ವದ ಹೋರಾಟದಲ್ಲಿ ತೊಡಗಿರುವ ಹಾಗೆಯೇ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿರುವ ಹಲವು ಹೆಣ್ಣುಮಕ್ಕಳ ಕಥೆಯಿದೆ.

1994ರಲ್ಲಿ ಈ ಕೃತಿಯ ಮರು ಮುದ್ರಣದ ಮುನ್ನುಡಿಯಲ್ಲಿ ಸ್ವತಃ ಕಾರಂತರೇ ಈ ರೀತಿ ಹೇಳಿಕೆಯನ್ನು ನೀಡಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ "ಜೀವನದ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀಯ ಮನಸ್ಸು ಮತ್ತು ಶರೀರಗಳೆರಡೂ ಅವನ ಸೊತ್ತು. ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ." ಇದಕ್ಕೆ ಪ್ರಮಾಣವೆನ್ನುವಂತೆ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಇದನ್ನು ಸ್ಪಷ್ಟಪಡಿಸುತ್ತವೆ. ಈ ಕಾದಂಬರಿಯಲ್ಲಿ ಬರುವ ಪ್ರಮುಖ ಸ್ತ್ರೀ ಪಾತ್ರಗಳೆಂದರೆ ಜಾನಕಿ, ಭಾಗೀರಥಿ, ಸುನಾಲಿನಿ, ಸರಸಮ್ಮ, ನಾಗವೇಣಿಯರಾಗಿದ್ದು ಇವರೆಲ್ಲರ ಕಥೆ ಒಂದೊಂದು ರೀತಿಯಾಗಿದೆ.

ಐದು ಮಕ್ಕಳ ತಾಯಿಯಾದ ಜಾನಕಿ ತನ್ನ ಗಂಡನಿಂದ ಒಂದಿಷ್ಟು ಪ್ರೀತಿಯನ್ನು ಪಡೆಯದ ನಿರ್ಭಾಗ್ಯ ಸ್ತ್ರೀ ಪಾತ್ರವಾಗಿದ್ದು, ಕೇವಲ ಗಂಡನ ದೌರ್ಜನ್ಯಕ್ಕೆ ಒಳಗಾದ

ಜಾನಕಿ ತನ್ನ ಹೆಣ್ಣುಮಕ್ಕಳ ಭವಿಷ್ಯದ ಕಾಳಜಿಯಿಂದ ಗಂಡನೊಂದಿಗೆ ಚರ್ಚಿಸಲು ಮುಂದಾಗಿ, ಅವನಿಂದ ನಿತ್ಯವೂ ಬೈಗುಳಗಳನ್ನು ಕೇಳಿ ನೆರೆಮನೆಯ ಸೀತಕ್ಕನೊಡನೆ ದುಃಖ ತೋಡಿಕೊಳ್ಳುವ ಅಸಹಾಯಕಿಯಾಗಿದ್ದರೂ ಸಹ ತನ್ನ ಕುಟುಂಬದ ಹಿತಕ್ಕಾಗಿ ಗೇಣಿದಾರನೊಡನೆ ನಾಜೂಕಾಗಿ ಮಾತನಾಡಿ ತನ್ನ ಗಂಡನಿಂದ ಸಾಧ್ಯವಾಗದ ಬಾಕಿ ಹಣವನ್ನು ವಸೂಲಿ ಮಾಡುತ್ತಾಳೆ. ಜೊತೆಗೆ ತನ್ನ ಗಂಡನಿಗೆ ತಿಳಿಯದಂತೆ ಮಗಳಿಗೆ ಮೂಗುತಿ ಮಾಡಿಸಲು ನಿರ್ಧರಿಸಿ ಅದರಲ್ಲಿ ವಿಫಲಳಾಗಿ ಗಂಡನಿಂದ ಈ ರೀತಿಯ ಬೈಗುಳವನ್ನು ಕೇಳುತ್ತಾಳೆ.

"ಅಲ್ಲ, ಇನ್ನೂ ಮುಂದೆ ನನ್ನ ಆಸ್ತಿಯ ವಹಿವಾಟನ್ನು ನೀನೇ ನೋಡಿಕೊಂಡು ಬಿಡು. ಗೇಣಿ ವಸೂಲಿ, ಒಕ್ಕಲನ್ನು ಸೇರಿಸುವುದು, ಬಿಡುವುದು, ಕೋರ್ಟಿಗೆ ಹೋಗುವುದು, ಬಿಡುವುದು. ಎಲ್ಲ ನಿನಗಿರಲಿ. ನಾನು ಮನೆಯಲ್ಲಿ ದೇವರ ಪೂಜೆ ಮಾಡಿಕೊಂಡಿರುತ್ತೇನೆ. ಐದು ಹೆಣ್ಣುಮಕ್ಕಳನ್ನು ಪಡೆದ ಮಹಾತಾಯಿ ನೀನು, ಡಜನ್‌ಗೆ ಇನ್ನೂ ಏಳು ಕಡಿಮೆಯಷ್ಟೇ. ಅವರಿಗೆಲ್ಲ ಚಿನ್ನಗಿನ್ನ ಮಾಡಿಸಿ ಅಳಿಯಂದಿರನ್ನೆಲ್ಲಾ ಹುಡುಕಿ ತಂದು ಒಂದು ಸಂಭ್ರಮ ನಡೆಸು" ಎಂದು ವ್ಯಂಗ್ಯವಾಡುತ್ತಾನೆ. (ಸರಸಮ್ಮನ ಸಮಾಧಿ – ಡಾ. ಶಿವರಾಮ ಕಾರಂತ, ಪ್ರಕಾಶಕರು – ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು. ಪ್ರಕಟಣಾ ಸಂಪುಟ – 2020, ಪುಟ ಸಂಖ್ಯೆ – 3.)

ಜಾನಕಿಯ ಗಂಡನ ಪ್ರಕಾರ ಹೆಣ್ಣು ಕೇವಲ ಗೃಹಕಾರ್ಯಗಳಿಗೆ ಸೀಮಿತವಾಗಿದ್ದು, ಮಕ್ಕಳನ್ನು ಹಡೆಯುವ ಯಂತ್ರವಾಗಿದ್ದಾಳೇ ಹೊರತು, ತನ್ನ ಕುಟುಂಬದ ಏಳಿಗೆಗಾಗಿ ಪತಿಗೆ ಸರಿಸಮನಾಗಿ ದುಡಿಯುವ, ಮಾತಾನಾಡುವ, ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವು ಅವಳಿಗಿಲ್ಲ. ಜೊತೆಗೆ ತನ್ನ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸುವ, ಅವರಿಗೆ ಅನುರೂಪರಾದ ಹುಡುಗರನ್ನು ಆರಿಸುವ ಅಧಿಕಾರವು ಅವಳಿಗಿಲ್ಲ. ಈ ಕಾರಣದಿಂದಲೇ ಜಾನಕಿಯ ಮೊದಲ ಮಗಳಾದ ಹದಿನಾರು ವರ್ಷದ ನಾಗವೇಣಿಗೆ ಆಗಲೇ ಎರಡು ಬಾರಿ ವಿಧುರನಾದ, ನಿರುದ್ಯೋಗಿಯಾದ, ಸೋಮಾರಿ, ಅನೇಕ ಚಟಗಳ ದಾಸನಾದ ಮೂವತ್ತು ವರ್ಷದ ಸೀತಾರಾಮನೊಡನೆ ಜಾನಕಿಯ ಗಂಡನಾದ ತಿಪ್ಪಯ್ಯ ಖರ್ಚಿಲ್ಲದೆ ಸುಲಭವಾಗಿ ಮದುವೆ ಮಾಡಿಸುತ್ತಾನೆ. ತಂದೆ ಮಾತಿಗೆ ತಲೆಬಾಗಿ ಸೀತಾರಾಮನೊಂದಿಗೆ ಮದುವೆಯಾದ ನಾಗವೇಣಿ ತನ್ನ ಗಂಡನಿಂದಲೇ ಅತ್ಯಾಚಾರಕ್ಕೆ ಒಳಗಾಗುವುದನ್ನು ಕಾಣಬಹುದಾಗಿದೆ. ಗಂಡನ ಕುತಂತ್ರ ತಿಳಿಯದ ಜಾನಕಿ ಉಳಿದ ಹೆಣ್ಣುಮಕ್ಕಳಿಗೂ ಇದೇ ರೀತಿಯ ಒಳ್ಳೆಯ ಸಂಬಂಧ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುವ ಪ್ರಸಂಗ ಬಹು ಶೋಚನೀಯವಾಗಿದೆ.

ಜಾನಕಿಯ ಗುಲಾಮತನದ ಬದುಕನ್ನು ತಿರಸ್ಕರಿಸುವ ಪಾತ್ರವಾಗಿ ಭಾಗೀರಥಿ ಕಂಡುಬರುತ್ತಾಳೆ. ನೂರಾರು ಕನಸುಗಳನ್ನು ಹೊತ್ತು ಮದುವೆಯಾಗಿ ಗಂಡನ ಮನೆಗೆ ಬರುವ ಭಾಗೀರಥಿ ಮಾವ ವೆಂಕಟರಮಣರ ಮಾತುಗಳನ್ನು ಕೇಳಿ ಅಧೀರಳಾಗುತ್ತಾಳೆ.

ಮಾವ ತನ್ನ ಹೆಂಡತಿಯ ಬಳಿ ಈ ರೀತಿಯಲ್ಲಿ ಹೇಳುತ್ತಾನೆ:

"ನಿನ್ನ ಮಗನಿಗೆ ಸ್ವಲ್ಪ ಬುದ್ಧಿಯನ್ನು ಹೇಳು, ಹೆಂಡತಿ ಮನೆಗೆ ಬಂದಳು ಎಂದು ನಾಯಿಯ ಹಿಂದಿನ ಬಾಲವಾಗುವುದಲ್ಲ. ಯಾವುದು ಎಲ್ಲೆಲ್ಲಿರಬೇಕೋ ಅದು ಅಲ್ಲಲ್ಲಿ ಇದ್ದರೆನೆ ಚಂದ. ಕಾಲಿನದು ಕಾಲಿಗೆ, ತಲೆಗಲ್ಲ."

ನಂತರ ಗಂಡನ ಸಲಹೆಯ ಮೇರೆಗೆ ಭಾಗೀರಥಿಯ ಅತ್ತೆಯು ಸಹ ಮಗನ ಬಳಿ ಹೀಗೆ ಹೇಳುತ್ತಾಳೆ.

'ಮಗಾ, ಈಗಲೇ ಸಲಿಗೆ ತೋರಿಸಿದರೆ "ನೆಲೆಕೊಟ್ಟ ನಾಯಿ ನೊಸಲು ನೆಕ್ಕಿತು ಎಂಬಂತಾದರೆ ಕಷ್ಟ." ಅದಕ್ಕೇನೆ ಅವರೆಂದದ್ದು; ಕಾಲಿಗಿರುವುದು ಕಾಲಿಗೆ ಇರಬೇಕು" ಎಂದು. (ಸರಸಮ್ಮನ ಸಮಾಧಿ – ಡಾ. ಶಿವರಾಮ ಕಾರಂತ, ಪ್ರಕಾಶಕರು – ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು. ಪ್ರಕಟಣಾ ವರ್ಷ – 2020, ಪುಟ ಸಂಖ್ಯೆ – 37.)

ಈ ಸಂದರ್ಭದಲ್ಲಿ ನಾವು ಬಾನು ಮುಷ್ತಾಕ್ ಅವರ 'ಚಪ್ಪಲಿಗಳು' ಎಂಬ ಸಣ್ಣಕತೆಯಲ್ಲಿನ ಸಮೀರಳ ತಂದೆಯ ಮಾತುಗಳನ್ನು ನೆನಪಿಸಿಕೊಳ್ಳಬಹುದು.

"ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ? ಚಪ್ಪಲಿಯನ್ನು ಎಲ್ಲಿಡಬೇಕೋ ಅಲ್ಲೇ ಇಡಬೇಕು". [ಶತಮಾನದ ಸಣ್ಣಕಥೆ – ಬೊಳುವಾರು ಮಹಮ್ಮದ್ ಕುಂಞ, ಪ್ರಕಾಶಕರು – ಕರ್ನಾಟಕ ಸಾಹಿತ್ಯ ಅಕಾಡೆಮಿ, ಪ್ರಕಟಣಾ ವರ್ಷ – 2022, ಪುಟ ಸಂಖ್ಯೆ – 553, 554, (ಬಾನು ಮುಷ್ತಾಕ್ ಅವರ 'ಚಪ್ಪಲಿಗಳು' ಕಥೆ)].

ತನ್ನನ್ನು ಚಪ್ಪಲಿಗೆ, ನಾಯಿಗೆ ಹೋಲಿಸಿ ಮಾತನಾಡಿದ ಅತ್ತೆ–ಮಾವನ ಮನೆಯಲ್ಲಿ ಇರಲು ಇಚ್ಛಿಸದ ಸ್ವಾಭಿಮಾನಿಯಾದ ಭಾಗೀರಥಿ ತವರುಮನೆಗೆ ಹೋದವಳು ತಿರುಗಿ ಗಂಡನ ಮನೆಗೆ ಬರುವುದೇ ಇಲ್ಲ. ಇದರಿಂದ ಕುಪಿತರಾದ ವೆಂಕಟರಮಣಯ್ಯನವರು ತಮ್ಮ ಮಗನಿಗೆ ಎರಡನೇ ಮದುವೆ ಮಾಡಲು ಹೆಣ್ಣನ್ನು ಗೊತ್ತುಮಾಡುತ್ತಾರೆ. ಈ ಕಡೆ ಮದುವೆಯಾಗಿಯೂ ಬ್ರಹ್ಮಚಾರಿಣಿಯ ಬಾಳನ್ನು ಬದುಕುವ ಭಾಗೀರಥಿ ವಯೋಸಹಜವಾಗಿ ಚಂದ್ರಯ್ಯನ ಕಡೆಗೆ ಆಕರ್ಷಿತಳಾಗಿ ಆಕಸ್ಮಾತ್ ಆಗಿ ಒಮ್ಮೆ ಚಂದ್ರಯ್ಯನನ್ನು ಭೇಟಿಯಾಗುತ್ತಾಳೆ. ಇದನ್ನು ಕಂಡ ಊರಿನ ಜನರು ಅವಳನ್ನು ನಡತೆಗೆಟ್ಟವಳು ಎನ್ನುವಂತೆ ಬಿಂಬಿಸುತ್ತಾರೆ. ಮದುವೆಯಾದ ಗಂಡಸು ಹೆಂಡತಿ ತೊರೆದರೆ ಅಥವಾ ಸಾವನ್ನಪ್ಪಿದರೆ ಅವನು ಮರುಮದುವೆಯಾಗಬಹುದು. ಆದರೆ ಪತಿಯಿಂದ ದೂರಾದ ಹೆಣ್ಣು ಮತ್ತೊಂದು ಗಂಡಸನ್ನು ಬಯಸಿದರೆ ಮಾತ್ರ ಸಮಾಜ ಅವಳನ್ನು ವ್ಯಭಿಚಾರಿಣಿಯಂತೆ ನೋಡುತ್ತದೆ.

ಇದೇ ರೀತಿಯಲ್ಲಿ ಗಂಡ ಸಮಯ ನೀಡುತ್ತಿಲ್ಲವೆಂದು ಗಂಡನ ಪ್ರೀತಿಗೆ

ಹಂಬಲಿಸುವ ಪಾತ್ರವಾಗಿ ವಿದ್ಯಾವಂತೆ, ಗುಣವಂತೆಯಾದ ಸುನಾಲಿನಿ ಕಂಡುಬರುತ್ತಾಳೆ. ತನ್ನ ಗಂಡ ತನಗೆ ಸಮಯ ಕೊಡುತ್ತಿಲ್ಲ ಎಂದು ಹೇಳಿದ್ದೇ ತಪ್ಪೆಂದು ವಾದಿಸುವ ಅತ್ತೆ ಮತ್ತು ಗಂಡ, ಅವಳ ಸೌಂದರ್ಯ, ವಿದ್ಯೆ, ಅವಳ ತಿಳುವಳಿಕೆ ಜೊತೆಗೆ ಅವಳ ಪೇಪರ್ ಓದುವ ಹವ್ಯಾಸ ಎಲ್ಲದರ ಬಗ್ಗೆ ಬಹು ಹೀನಾಯವಾಗಿ ಮಾತನಾಡುತ್ತಾರೆ. ಈ ರೀತಿಯ ಅಭ್ಯಾಸಗಳಿಂದಲೇ ನಿನ್ನ ತಂದೆ ದೀವಾಳಿಯಾಗಿ ನಿನ್ನನ್ನು ನಮಗೆ ಗಂಟು ಹಾಕಿದರೆಂದು ಮೂದಲಿಸಿ, ತನ್ನ ಮಗನಿಗೆ ಎರಡನೇ ಮದುವೆ ಮಾಡಿಸುವುದಾಗಿ ಅತ್ತೆ ಹೇಳುತ್ತಾರೆ. ಅದಕ್ಕೆ ತಿರುಗೇಟು ನೀಡುವ ಸುನಾಲಿನಿ ಚಂದ್ರಯ್ಯನ ಮುಂದೆ ಎಲ್ಲ ಸತ್ಯವನ್ನು ಅರುಹಿ ಮುಂದೆ ತನಗೆ ಏನಾದರೂ ಆದರೆ ಅದಕ್ಕೆ ಅತ್ತೆ ಮತ್ತು ಗಂಡನೇ ಕಾರಣವೆಂದು ತಿಳಿಸುತ್ತಾಳೆ. ಅತ್ತ ತಂದೆ ಮನೆಗೆ ತಿರುಗಿ ಹೋಗಲಾರದೆ, ಇತ್ತ ಗಂಡನ ಮನೆಯಲ್ಲಿ ನೆಮ್ಮದಿಯಾಗಿ ಬಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಚಂದ್ರಯ್ಯನ ಸಮಯಪ್ರಜ್ಞೆಯಿಂದ ಬದುಕುಳಿದು ತನ್ನ ತಂದೆಯ ಮನೆಯನ್ನು ಸೇರುತ್ತಾಳೆ. ಇತ್ತ ಮನೆಯಲ್ಲಿ ಸುನಾಲಿನಿಯನ್ನು ಕಾಣದ ಗಂಡ ಮತ್ತು ಅತ್ತೆ ಅವಳು ಮತ್ತೊಬ್ಬನ ಜೊತೆಗೆ ಓಡಿಹೋಗಿದ್ದಾಳೆ ಎಂದು ತಮ್ಮ ತಪ್ಪನ್ನು ಮುಚ್ಚಿಹಾಕಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ.

ಕಾದಂಬರಿಯ ಕೇಂದ್ರ ಪಾತ್ರವಾದ ಸರಸಮ್ಮನದು ಮತ್ತೊಂದು ಕಥೆ. ಆಕೆಯ ಸಾವಿಗೆ ಹಲವಾರು ರೂಪ ನೀಡಿ ಆಕೆಯನ್ನು ದೈವದ ರೀತಿಯಲ್ಲಿ ಪೂಜಿಸಲಾಗುತ್ತದೆ. ಯಾರ ದಾಂಪತ್ಯ ಜೀವನವೂ ಸರಿ ಇರುವುದಿಲ್ಲವೋ ಅವರೆಲ್ಲರೂ ತಮ್ಮ ದಾಂಪತ್ಯ ಸರಿ ಹೋಗಲೆಂದು ಸರಸಮ್ಮನನ್ನು ನಂಬಿ ಆಕೆಯ ಸಮಾಧಿಯನ್ನು ಪೂಜಿಸುತ್ತಾರೆ. ಐದು ಮಕ್ಕಳ ತಾಯಿಯಾದ ಜಾನಕಿ, ಸುನಾಲಿನಿ, ಹಿರಣ್ಯ ಹೀಗೆ ಸುತ್ತಮುತ್ತಲಿನ ಗ್ರಾಮದವರೆಲ್ಲ ಬಹು ಭಯದಿಂದ, ಗೌಪ್ಯವಾಗಿ, ಭಕ್ತಿಯಿಂದ ಸರಸಮ್ಮನಿಗೆ ಹರಕೆ ಕಟ್ಟುವುದನ್ನು ಕಾಣಬಹುದು. ಜನರ ಬಾಯಿಯಲ್ಲಿ ಸರಸಮ್ಮನ ದಂತಕಥೆ ಬಹು ರೋಚಕವಾಗಿ ಚಿತ್ರಿಸಲ್ಪಟ್ಟಿದೆ. ಸರಸಮ್ಮ ಸತ್ತ ಗಂಡನ ಚಿತೆಗೆ ಸ್ವಯಂ ಪ್ರೇರಣೆಯಿಂದ ಹಾರಿದಳು. ಆಗ ಬಂದ ಹೊಗೆ ಸುರುಳಿಯಾಕಾರದಲ್ಲಿ ಮೇಲೇರಿದ್ದನ್ನು ನೋಡಿದ ಜನರೂ ಇದ್ದರಂತೆ. ಜೊತೆಗೆ ಸುತ್ತಮುತ್ತಲಿನ ಗ್ರಾಮದವರೆಲ್ಲ ಸರಸಮ್ಮನಿಗೆ ಹರಕೆ ಕಟ್ಟಿದ ಮೇಲೆ ಸಂಸಾರ ಸರಿಹೋದವರ ಬಗೆಗಿನ ಕಥೆಗಳನ್ನು ಬಹಳ ರಸವತ್ತಾಗಿ ವಿವರಿಸುತ್ತಾರೆ. ಆದರೆ ಮೂಲದಲ್ಲಿ ಸರಸಮ್ಮ ತನ್ನ ಸಂಸಾರದಲ್ಲಿಯೇ ನೆಮ್ಮದಿ ಮತ್ತು ಪ್ರೀತಿಯನ್ನು ಪಡೆಯಲಾರದೆ ಪತಿಯಿಂದ ಬದುಕಿದ್ದಾಗಲೂ ಮತ್ತು ಸತ್ತ ನಂತರವೂ ದೌರ್ಜನ್ಯಕ್ಕೆ ಒಳಗಾಗಿ, ನಿಜ ಪ್ರೀತಿಗಾಗಿ ಹಂಬಲಿಸುವ ಭೂತವಾಗಿ ಕಂಡುಬರುತ್ತಾಳೆ. ಅವಳು ಒಬ್ಬ ಆತ್ಮಸಖನಿಗಾಗಿ ನೂರಾರು ವರ್ಷಗಳಿಂದ ಕಾದಿರುವುದು ಚಂದ್ರಯ್ಯನಿಗೆ ತಿಳಿಯುತ್ತದೆ. ಊರಿನವರು ತಮ್ಮ ಸಂಸಾರ ಸರಿ ಮಾಡೆಂದು ಪೂಜಿಸುವ ದೇವತೆ ಸರಸಮ್ಮನೇ ಈ ಅತೃಪ್ತ ಆತ್ಮವೆಂದು ತಿಳಿದು ಆಶ್ಚರ್ಯಪಡುತ್ತಾನೆ. ಚಂದ್ರಯ್ಯ ಮತ್ತು ಸರಸಮ್ಮನ (ಬೆಳ್ಯಕ್ಕನ) ಭೂತಕ್ಕೂ ನಡೆದ ಸಂಭಾಷಣೆ ಬಹು ಮನೋಜ್ಞವಾಗಿದೆ.

"ಏಕೆ? ದುಃಖಿ ದಂಪತಿಗಳಿಗೆ ಸುಖ ಕೊಡುವವಳು ಸರಸಮ್ಮನಲ್ಲವೇ? ಅಂಥವಳ ಗುಡಿಯಿಂದ ನೀನೇಕೆ ಓಡಿ ಬಂದೆ? ಅದೇ ಕೆರೆಯಲ್ಲಿ ಮಿಂದವಳು ನೀನು, ಅಲ್ಲೇನು ಅಂಜಿಕೆ ನಿನಗೆ?"

"ಅಹುದು ಆ ಒಂದು ವಿಷಯ ಹೇಳಬಾರದು ಎಂದಿತ್ತು. ನೀನು, ಎಲ್ಲವನ್ನು ಈಗ ಹೇಳುವಂತೆ ಮಾಡಿದೆ."

"ಏನದು?"

"ಅದು ನನ್ನದೇ ಮನೆ. ನನ್ನ ಪತಿ ನನ್ನನ್ನು ಈ ಅವಸ್ಥೆಗೆ ಇಳಿಸಿದವನು. ನೀಲಾಚಲ ಮಲಗಿದ ಸ್ಥಳ. ಅವನ ಪ್ರೇತ ನನ್ನನ್ನು ಅಲ್ಲಿ ಅಂಕೆಯಲ್ಲಿರಿಸುತ್ತದೆ. ನಾನು ಬೇಡವೆಂದು ರೋಧಿಸಿದರೂ, ಅವನ ರೋಗಿಷ್ಠ ಶರೀರದೊಡನೆ ನನ್ನನ್ನು ಸುಟ್ಟರು. ನರಘಾತುಕರು ನನ್ನನ್ನು ಸುಟ್ಟು ಮಹಾಸತಿಯನ್ನಾಗಿ ಮಾಡಿದರು."

"ಏನು, ನೀನು ಮಹಾಸತಿ ಸರಸಮ್ಮನೇ?"

"ಈ ಹಾಳು ಜನರ ಪಾಲಿಗೆ" (ಸರಸಮ್ಮನ ಸಮಾಧಿ – ಡಾ. ಶಿವರಾಮ ಕಾರಂತ, ಪ್ರಕಾಶಕರು – ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು. ಪ್ರಕಟಣಾ ವರ್ಷ – 2020, ಪುಟ ಸಂಖ್ಯೆ – 120.)

ಅನಾದಿ ಕಾಲದಿಂದಲೂ ಭಾರತೀಯ ಸಂಸ್ಕೃತಿಯು ಸಂಪ್ರದಾಯದ ಹೆಸರಿನಲ್ಲಿ ಸ್ತ್ರೀಯನ್ನು ದ್ವಿತೀಯ ಪ್ರಜೆಯಾಗಿ ನಡೆಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಅದಕ್ಕೆ ಉದಾಹರಣೆಯಾಗಿ ಸೀತೆ, ಸಾವಿತ್ರಿ, ಮಾಧವಿ, ಅಹಲ್ಯೆ, ದ್ರೌಪದಿ, ನಮ್ಮ ಕಥಾನಾಯಕಿ ಸರಸಮ್ಮ ಹೀಗೆ ಹಲವರನ್ನು ಕಾಣಬಹುದಾಗಿದೆ. ಪಾತಿವ್ರತ್ಯ, ಪಾಪ–ಪುಣ್ಯ, ಆಚಾರ–ವಿಚಾರ, ಧರ್ಮ ಮತ್ತು ಸಂಪ್ರದಾಯಗಳ ಹೆಸರುಗಳಲ್ಲಿ ಹೆಣ್ಣಿನ ಮೇಲಿನ ದೌರ್ಜನ್ಯ ನಿರಂತರವಾಗಿದೆ. ಈ ಸಮಾಜದಲ್ಲಿ ಗಂಡಸು ಬಹುಪತ್ನಿಯರನ್ನು ಹೊಂದಬಹುದು, ಹೆಂಡತಿ ಸತ್ತರೆ ಅಥವಾ ಹೆಂಡತಿ ತೊರೆದರೆ ಮತ್ತೊಂದು ವಿವಾಹವಾಗಬಹುದು. ಆದರೆ ಹೆಣ್ಣು ಮಾತ್ರ ಒಬ್ಬ ಪತಿಗೆ ಮಾತ್ರ ಬದ್ಧಳಾಗಿರಬೇಕೆಂದು ನಮ್ಮ ಸಮಾಜ ಬಯಸುತ್ತದೆ. ಜೊತೆಗೆ ಮಹಾಸತಿಯ ಕಲ್ಪನೆಯ ಹೆಸರಿನಲ್ಲಿ ಹೆಣ್ಣನ್ನು ಆಕೆಯ ಗಂಡನ ಚಿತೆಗೆ ಬಲವಂತವಾಗಿ ತಳ್ಳಿ ಅವಳ ಬಗೆಗೆ ಹಲವಾರು ಕಥೆಗಳನ್ನು ಹೆಣೆದು ಅವಳ ಹೆಸರಿನಲ್ಲಿ ಗುಡಿಯನ್ನು ಕಟ್ಟಿ ದೈವದಂತೆ ಪೂಜಿಸುವುದನ್ನು ಕಾಣಬಹುದಾಗಿದೆ. ಈ ಮೂಲಕ ಉಳಿದ ಸ್ತ್ರೀಯರೂ ಪರೋಕ್ಷವಾಗಿ ಅದೇ ಮಾರ್ಗದಲ್ಲಿ ಸಾಗಬೇಕೆಂದು ಇಂದಿಗೂ ನಮ್ಮ ಸಮಾಜ ಅಪೇಕ್ಷಿಸುತ್ತದೆ.

ಕಾಲ ಬದಲಾದಂತೆ ಮನುಷ್ಯನ ವೈಚಾರಿಕತೆಯು ಸಹ ಬದಲಾಗಿದ್ದು ಸ್ತ್ರೀಯರನ್ನು ನೋಡುವ ದೃಷ್ಟಿಕೋನವು ಬದಲಾಗಿದೆ. ಪ್ರಸ್ತುತ ನಮ್ಮ ಸಮಾಜದಲ್ಲಿ ಪುರುಷನಿಗೆ ಸರಿಸಮನಾಗಿ ಸ್ತ್ರೀಯರನ್ನು ಕಾಣುವ ಮನೋಭಾವನೆ ಬಂದಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ವಿವಾಹವಾಗಲು ತನಗೆ ತಕ್ಕನಾದ ವರನನ್ನು

ಆಯ್ಕೆಮಾಡಿಕೊಳ್ಳುವ ಅವಕಾಶವು ಹೆಣ್ಣುಮಕ್ಕಳಿಗೆ ಪ್ರಾಯಶಃ ದೊರೆತಿದೆ. ವಿವಾಹದ ನಂತರವೂ ತನಗಾಗಿ ಮತ್ತು ತನ್ನ ಕುಟುಂಬಕ್ಕಾಗಿ ದುಡಿಯುವ ಮಹಿಳೆಯರನ್ನು ನಾವು ಇಂದು ಕಾಣಬಹುದು. ಹಾಗಾದರೆ ಪ್ರಸ್ತುತ ಸಮಾಜದಲ್ಲಿ ಸ್ತ್ರೀಶೋಷಣೆ ಇಲ್ಲವೇ? ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಂಡರೆ ನಮಗೆ 'ಇಲ್ಲ' ಎಂಬ ಉತ್ತರ ದೊರೆಯುತ್ತದೆ. ಅದಕ್ಕೆ ನಿದರ್ಶನವೆನ್ನುವಂತೆ ದಿನನಿತ್ಯ ನಾವು ಅನೇಕ ಘಟನೆಗಳನ್ನು ದೂರದರ್ಶನ ಹಾಗೂ ದಿನಪತ್ರಿಕೆಗಳಲ್ಲಿ ನೋಡುತ್ತೇವೆ ಹಾಗೂ ಓದುತ್ತೇವೆ. ಇದಕ್ಕೆ ಪೂರಕವಾಗಿ ಪ್ರೋ. ಕವಿತಾ ರೈ ಅವರ 'ಒಲೆ' ಎಂಬ ಕವನ ನಮಗೆ ಒಂದು ಉತ್ತಮ ಉದಾಹರಣೆಯಾಗಿದೆ. ಅಲ್ಲಿ ಪ್ರೋ. ಕವಿತಾ ರೈ ಅವರು ಈ ರೀತಿ ಹೇಳಿದ್ದಾರೆ.

**"ಒಲೆ ಬದಲಾದರೇನು ಉರಿ ಬದಲಾಗಿದೆಯೇ**
**ಅಡುಗೆಯ ಅನುಭವ ಇಬ್ಬರಿಗೂ ಇದೆ**
**ಉಷ್ಣತೆಯ ತಾಪಕ್ಕೆ ಮುಚ್ಚಳ ಹಾರೀತು**
**ಕುಕ್ಕರಲ್ಲವೇ ತಾನೆ ತಣಿಯಲೆಂದು**
**ಕಾಯಲಾಗುವುದಿಲ್ಲ**
**ಆವಿ ಹೋಗಲೇಬೇಕು ಹೊರಗೆ."**

(ಕನ್ನಡ ಸಾಹಿತ್ಯ ಸಮಾಗಮ – ಸಂ. ಶ್ರೀಮತಿ ರೇಖಾ ವಸಂತ, ಡಾ. ಲೋಲಾಕ್ಷಿ, ಪ್ರಕಾಶಕರು – ಕನ್ನಡ ಸಾಹಿತ್ಯ ಪರಿಷತ್ತು, ಪ್ರಕಟಣಾ ವರ್ಷ – 2019, ಪುಟ ಸಂಖ್ಯೆ – 31, 32. 'ಒಲೆ' ಕವನ ಪ್ರೋ. ಕವಿತಾ ರೈ.)

ಪರಂಪರೆಯ ಬೆಂಕಿ ಉರಿವ ರೀತಿ ಬದಲಾಗಿ ಆಧುನಿಕವಾದ ಗ್ಯಾಸ್ ಸ್ಟೌವ್‌ಗಳು ಬಂದರೂ ಹೊಗೆಯೂದುವ ಕ್ರಮ ಬದಲಾಗಿದೆ ಅಷ್ಟೇ. ಆದರೆ ಹೆಣ್ಣಿನ ಸಮಸ್ಯೆಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲವೆಂದು ಪ್ರೋ. ಕವಿತಾ ರೈ ಅವರು ಹೇಳಿದ್ದಾರೆ. ಅಂದರೆ ಈಗಲೂ ಸಹ ಸ್ತ್ರೀಯರ ಮೇಲಿನ ದೌರ್ಜನ್ಯ ನಿಂತಿಲ್ಲ. ಬದಲಿಗೆ ಅದರ ರೂಪ ಬದಲಾಗಿದೆ ಅಷ್ಟೇ. ಹಿಂದೆ ಕೇವಲ ಕುಟುಂಬಕ್ಕಷ್ಟೇ ಮೀಸಲಾಗಿದ್ದ ಸ್ತ್ರೀ ಈಗ ಕುಟುಂಬದ ಜೊತೆಜೊತೆಗೆ ಉದ್ಯೋಗ, ಮಕ್ಕಳು, ಆರ್ಥಿಕ ವಿಚಾರ, ಅಷ್ಟೇ ಅಲ್ಲದೆ ರಾಜಕೀಯ ಕ್ಷೇತ್ರವನ್ನು ನಿಭಾಯಿಸಬಲ್ಲಳು. ಆದರೆ ಸಮಾಜದಲ್ಲಿ ಹೆಣ್ಣು ಮಕ್ಕಳ ಅಪಹರಣ, ಅತ್ಯಾಚಾರ, ಮಾನವ ಕಳ್ಳಸಾಗಾಣಿಕೆ ಮುಂತಾದ ಅನಿರೀಕ್ಷಿತ ಸಂದರ್ಭಗಳು ಆಗಲೂ ಇತ್ತು, ಈಗಲೂ ಇದೆ. ಆದರೆ ಶಿಕ್ಷಣ, ಉದ್ಯೋಗ, ಆರ್ಥಿಕ ಸಬಲೀಕರಣದಂತಹ ವಿಚಾರಗಳಿಂದ ಸ್ತ್ರೀಯರ ಆತ್ಮವಿಶ್ವಾಸ ಹೆಚ್ಚಾಗುತ್ತಿದೆ ಎಂದು ಹೇಳಬಹುದು.

ಪ್ರಸ್ತುತ ಕಾರಂತರ ಸ್ತ್ರೀ ಸಂವೇದನೆಯ ಹಣತೆಯಲ್ಲಿ ಮೂಡಿಬಂದಿರುವ ಬೆಳಕಾಗಿ 'ಸರಸಮ್ಮನ ಸಮಾಧಿ' ಕಾದಂಬರಿಯು ನಮ್ಮ ಸಮಾಜದ ದಾಂಪತ್ಯದ ದಳ್ಳುರಿಯ ಹಲವು ಮಜಲುಗಳನ್ನು ಎಳೆ ಎಳೆಯಾಗಿ ಹಲವು ಮಜಲುಗಳಲ್ಲಿ ತೆರೆದುಕೊಳ್ಳುವ ಪರಿಯನ್ನು ಇಲ್ಲಿ ಕಾಣಬಹುದು. ವೈವಾಹಿಕ ಬದುಕಿನ ಮುಖವಾಡಗಳನ್ನು ಕಳಚಿ ವೈಚಾರಿಕ ಹಿನ್ನೆಲೆಯಲ್ಲಿ ಜೀವನದ ಸತ್ಯಗಳನ್ನು ಇಣುಕಿ

ನೋಡಲು ಅಣಿವು ಮಾಡಿಕೊಟ್ಟಿದೆ. ಸ್ತ್ರೀ ಅಂತಃಕರಣದ ಸ್ವಗತವನ್ನು, ಅತಂತ್ರ ದಾಂಪತ್ಯ ಜೀವನದ ಒಳನೋಟವನ್ನು, ಬದುಕಿನ ಭವಿಷ್ಯದಲ್ಲಿ ಮಸುಕಾಗಿರುವ ಭೂತಗಳನ್ನು, ಗೋಜಲುಗಳ ಗೂಡಾಗಿರುವ ಕೌಟುಂಬಿಕ ಪರಿಸ್ಥಿತಿಗಳನ್ನು ಅಸ್ತಿತ್ವದ ತುಮುಲದೊಂದಿಗೆ ಹೋರಾಡುತ್ತಿರುವ ಸ್ತ್ರೀಯ ಒಡಲಾಳದ ದರ್ಶನದೊಂದಿಗೆ, ತಾವಿಲ್ಲದ ಸೂರಿನಡಿ ಚಡಪಡಿಸುತ್ತಿರುವ ಸ್ತ್ರೀ ಸಂವೇದನೆಯನ್ನು ವಾಸ್ತವದ ಕನ್ನಡಿಯಲ್ಲಿ ಬಿಂಬಿಸಿರುವ ಕಾರಂತರ ಅಪ್ರತಿಮ ಕಾದಂಬರಿ 'ಸರಸಮ್ಮನ ಸಮಾಧಿ' ಈ ಎಲ್ಲ ನೆಲೆಗಟ್ಟಿನಲ್ಲಿ ಸಾರ್ಥಕತೆಯನ್ನು ಮೆರೆಯುತ್ತ ಸ್ಮರಣೀಯವಾಗಿದೆ.

## ಪರಾಮರ್ಶನ ಗ್ರಂಥಗಳು:

1. ಶಿವರಾಮ ಕಾರಂತ, (2020), ಸರಸಮ್ಮನ ಸಮಾಧಿ, ಬೆಂಗಳೂರು: ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್.
2. ಬೊಳುವಾರು ಮಹಮ್ಮದ್ ಕುಂಞಿ (ಸಂ), (2022), ಶತಮಾನದ ಸಣ್ಣಕಥೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ರೇಖಾ ವಸಂತ ಮತ್ತು ಲೋಲಾಕ್ಷಿ (ಸಂ), (2019), ಕನ್ನಡ ಸಾಹಿತ್ಯ ಸಮಾಗಮ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.